2) ಆಧುನಿಕ ಉಪಕರಣಗಳನ್ನು ಒದಗಿಸುವ ಮೂಲಕ ಇಲಾಖೆಯನ್ನು ಬಲಪಡಿಸುವುದು.

3) ಸಿಬ್ಬಂದಿಗೆ ತರಬೇತಿಯನ್ನು ಕೊಡುವುದು.

4) ಭೂ ದಾಖಲೆಗಳ ಕಂಪ್ಯೂಟೀಕರಣ

5) ಮೈಕ್ರೋಫಿಲ್‌ಮಿಂಗ್ ಘಟಕ ಸ್ಥಾಪಿಸುವುದು.

ಇ) ಹೌದು.

ನೆಲಮಂಗಲ ತಾಲ್ಲೂಕಿನಲ್ಲಿ ಭೂಸುಧಾರಣೆಯ ಕಾನೂನಿನ ಪ್ರಕಾರ ಘೋಷಣೆಯಾದ ಜಮೀನು

2255 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ತಾಲ್ಲೂಕಿನಲ್ಲಿ ಕರ್ನಾಟಕ ಭೂಸುಧಾರಣೆ ಕಾನೂನಿನ ಪ್ರಕಾರ ಭೂಮಿತಿಯ ಫಾರಂ 11ರ ಪ್ರಕಾರ ಎಷ್ಟು ಎಕರೆ ಜಮೀನು ಹೆಚ್ಚುವರಿ ಅಂತ ಸರ್ಕಾರ ಘೋಷಣೆ ಮಾಡಿದೆ

ಆ) ಹಾಗಿದ್ದಲ್ಲಿ, ಸದರಿ ಜಮೀನುಗಳ ಪೈಕಿ ಎಷ್ಟು ಎಕರೆ ಜಮೀನನ್ನು ಭೂರಹಿತ ಕೃಷಿ ಕಾರ್ಮಿಕರಿಗೆ ಹಂಚಲಾಗಿದೆ? (ಹೋಬಳಿವಾರು ಗ್ರಾಮವಾರು ಮಾಹಿತಿ ನೀಡುವುದು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ನೆಲಮಂಗಲ ತಾಲ್ಲೂಕಿನಲ್ಲಿ ಈವರೆಗೆ ಹೆಚ್ಚುವರಿ ಜಮೀನು ಘೋಷಣೆ ಆಗಿಲ್ಲ.

ಆ) ಮೇಲಿನ ಕಾರಣಗಳಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮಂಜೂರಾದ ಬಲ್ಕ್ ಪೆಂಡಿಂಗ್ ಬೂತುಗಳಲ್ಲಿ ಕನ್ಸೇಶನರಿಗಳು ಕಾರ್ಯ ನಿರ್ವಹಿಸದೇ ಬಿಟ್ಟುಕೊಟ್ಟಿರುವ ಬಗ್ಗೆ

2251 - ಶ್ರೀ ಗುರುಪಾದಪ್ಪ ನಾಗಮಾರ್‌ಪಲ್ಲಿ (ಔರಾದ್) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನ್ಸೇಷನರಿಗಳು ಮಂಜೂರಾಗಿರುವ ಬಲ್ಕ್ ವೆಂಡಿಂಗ್ ಹಾಲಿನ ಬೂತುಗಳಲ್ಲಿ ಕರ್ತವ್ಯ ನಿರ್ವಹಿಸದೆ ಇತರರಿಗೆ ಲಾಭಕ್ಕೆ ಬಿಟ್ಟುಕೊಟ್ಟು ತಾವು ಬೇರೆ ಕೆಲಸಗಳಲ್ಲಿ ತೊಡಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ? (ಉದಾ : ಶ್ರೀರಾಮಪುರದಲ್ಲಿರುವ ಬಲ್ಕ್ ಪೆಂಡಿಂಗ್ ಬೂತ್ ನಂ.318 ಕನ್ಸೇಷನರಿ ತಮ್ಮ ಹೆಸರಿಗೆ ಮಂಜೂರಾಗಿರುವುದನ್ನು ಬೇರೆಯವರಿಗೆ ಬಿಟ್ಟು ತಾವು ನಗರದ ಪೋಲೀಸ್ ರಸ್ತೆಯಲ್ಲಿ ಸಾಮಾನುಗಳ ಅಂಗಡಿಯನ್ನು ಪ್ರಾರಂಭಿಸುತ್ತಾರೆ)

ಆ) ನಗರದಲ್ಲಿ ಇಂತಹ ಎಷ್ಟು ಪ್ರಕರಣಗಳು ಪತ್ತೆಯಾಗಿರುತ್ತವೆ?

ಇ) ಈ ರೀತಿ ಬೇರೆಯವರಿಗೆ ವಹಿಸುವ ಕನ್ಸೇಷನರಿಗಳ ಮೇಲೆ ಕ್ರಮ ಕೈಗೊಂಡು ಅಂತಹ ಬೂತುಗಳನ್ನು ರದ್ದುಪಡಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಬಸವರಾಜ ಪಾಟೀಲ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು) :

ಅ) ಇಲ್ಲ

ಆ) ಇಲ್ಲ

ಇ) ನಿರ್ದಿಷ್ಟ ಪ್ರಕರಣಗಳನ್ನು ನಮೂದಿಸಿ ಲಿಖಿತ ದೂರುಗಳು: ಮಾಹಿತಿಗಳು ಬಂದರೆ ಪರಿಶೀಲಿಸಿ, ಮಾತ್ರ ಡೈರಿಯ ಜೊತೆ ಕನ್ಸೇಷನರಿ ಮಾಡಿಕೊಂಡಿರುವ ಕರಾರು ಅನ್ವಯ ಅಂತಹ ಬೂತುಗಳ ಕನ್ಸೇಷನರಿ ಷಿಪ್ಪನ್ನು ರದ್ದುಪಡಿಸಲಾಗುವುದು.

ಕಳ್ಳ ಸಾಗಣಿಕೆದಾರ ವೀರಪ್ಪನ್ ಬಂಧನದ ಬಗ್ಗೆ

2322 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದರೋಡೆಕೋರ ಹಾಗೂ ಕಳ್ಳ ಸಾಗಣಿಕೆದಾರ ವೀರಪ್ಪನನ್ನು ಬಂಧಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಅವನನ್ನು ಹಿಡಿಯಲು ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿದೆಯೇ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು)

ಅ) ವೀರಪ್ಪನ್ ಮತ್ತು ಆತನ ಗುಂಪಿನ ಸದಸ್ಯರನ್ನು ಹಿಡಿಯುವ ಸಲುವಾಗಿ ಕರ್ನಾಟಕ ಮತ್ತು ತಮಿಳುನಾಡು ಪೊಲೀಸರು 1990 ಜನವರಿ ಫೆಬ್ರುವರಿ ತಿಂಗಳಲ್ಲಿ ಜಂಟಿ ಕಾರ್ಯಾಚರಣೆ ನಡೆಸಿದರು. ಈ ಕಾರ್ಯಚರಣೆಯಿಂದಾಗಿ ವೀರಪ್ಪನ್ ಶೇಖರಿಸಿಟ್ಟಿದ್ದ ಲಕ್ಷಾಂತರ ರೂ. ಮೌಲ್ಯದ ಶ್ರೀಗಂಧವನ್ನು ವಶಪಡಿಸಿಕೊಳ್ಳಲಾಯಿತು. ವೀರಪ್ಪನ್ ಮತ್ತು ಆತನ ಸಹಚರರನ್ನು ಹಿಡಿಯುವ ಸಲುವಾಗಿ ರಾಜ್ಯ ಸರ್ಕಾರದ ಆದೇಶದನ್ವಯ ದಿನಾಂಕ 18-4-90ರಂದು ಅರಣ್ಯ ಮತ್ತು ಪೋಲೀಸ್ ಸಿಬ್ಬಂದಿ ಒಳಗೊಂಡಂತೆ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ದರ್ಜೆಯ ಅಧಿಕಾರಿಯ ನೇತ್ರತ್ವದಲ್ಲಿ ಟಾಸ್ಕ್ ಫೋರ್ಸನ್ನು ರಚಿಸಲಾಯಿತು. ಟಾಸ್ಕ್‌ಫೋರ್ಸ್ ರಚಿಸಿದಂದಿನಿಂದಲೂ ವೀರಪ್ಪನ್ ಮತ್ತು ಆತನ ತಂಡವನ್ನು ಹಿಡಿಯುವ ಸಲುವಾಗಿ ಎಲ್ಲಾ ಪ್ರಯತ್ನವನ್ನು ಮಾಡಲಾಗುತ್ತಿದೆ. ಗಸ್ತು ಕಾರ್ಯಾಚರಣೆ ಮತ್ತು ಅವನ ಸಹಚರರು ಅಡಗಿಕೊಂಡಿರಬಹುದಾದ ಅರಣ್ಯ ಪ್ರದೇಶವನ್ನು ಶೋಧಿಸುವ ಕಾರ್ಯವನ್ನು ತೀವ್ರಗೊಳಿಸಲಾಗಿದೆ. ವೀರಪ್ಪನ್ ನೆರೆ ರಾಜ್ಯದಿಂದ ಚಟುವಟಿಕೆಯನ್ನು ನಡೆಸುತ್ತಿರ ಬಹುದಾದ್ದುದರಿಂದ ಅವಶ್ಯಕ ಗುಪ್ತ ಮಾಹಿತಿ ಸಂಗ್ರಹಿಸಲು ಪ್ರತ್ಯೇಕ ತಂಡಗಳನ್ನು ನಿಯೋಜಿಸಲಾಗಿದೆ. ಟಾಸ್ಕ್‌ಫೋರ್ಸ್‌ನ ಅವಿರತ ಕಾರ್ಯಾಚರಣೆಯ ಫಲವಾಗಿ ವೀರಪ್ಪನ್ ಭಾಗಿಯಾಗಿರುವ ವಿವಿಧ ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿದ ಆತನ ಸಹಚರರು ಮತ್ತು ಸಹಾನುಭೂತಿ ಹೊಂದಿರುವ 54 ಮಂದಿಯನ್ನು ಬಂಧಿಸಲಾಗಿದೆ. ಅವರಲ್ಲಿ 3 ಮಂದಿಯನ್ನು ಇತ್ತೀಚೆಗೆ ದಿನಾಂಕ 17-8-91ರಂದು ಸೆರೆಹಿಡಿಯಲಾಗಿದೆ. ವೀರಪ್ಪನ್ ತಂಡದ ಬಹುತೇಕ ಸಹಚರರನ್ನು ಈಗಾಗಲೇ ಬಂಧಿಸಲಾಗಿದೆ. ಪ್ರಸ್ತುತ ತಲೆಮರಿಸಿಕೊಂಡಿರುವ ವೀರಪ್ಪನ್ ಮತ್ತು ಆತನ ತಂಡದ ಕೆಲವೇ ಸದಸ್ಯರ ಬಂಧನಕ್ಕಾಗಿ ಟಾಸ್ಕ್‌ಫೋರ್ಸ್ ತನ್ನ ಕಾರ್ಯವನ್ನು ಮುಂದುವರೆಸಿದೆ.

ಆ) ಈ ಕೆಳಗಿನ 2 ಕಾರಣಗಳಿಗಾಗಿ ವೀರಪ್ಪನ್ ಹುಟ್ಟೂರಾದ ಗೋಪಿನಾಥಂ ಮತ್ತು ಮಲೆ ಮಾದೇಶ್ವರ ಬೆಟ್ಟ ಹಾಗೂ ಪಾಲರ್ ಚೆಕ್ ಪೋಸ್ಟ್ ಈ ಪ್ರದೇಶಗಳಲ್ಲಿ ಟಾಸ್ಕ್‌ಫೋರ್ಸಿನ ಅಸ್ತಿತ್ವದ ಅವಶ್ಯಕತೆ ಇದೆ.

1. ಅವನ ಹಿಂಸಾತ್ಮಕ ಚಟುವಟಿಕೆ ತಡೆಗಟ್ಟಲು.

2. ಅವನನ್ನು ಬಂಧಿಸಲು.

ಮೊದಲನೆ ಪ್ರಯತ್ನದ ಯಶಸ್ವಿಯಿಂದಾಗಿ ಪ್ರಸ್ತುತ ವರ್ಷದಲ್ಲಿ ಯಾವುದೇ ರೀತಿಯ ಹಿಂಸಾತ್ಮಕ ಚಟುವಟಿಕೆ ನಡೆದಿರುವುದಿಲ್ಲ. ಮಾನವ ವಾಸಕ್ಕೆ ಯೋಗ್ಯವಲ್ಲದ